ಪೌಷ್ಟಿಕಾಂಶವುಳ್ಳ ತಳಿಗಳ ಪ್ರೋತ್ಸಾಹ, ತಾಂತ್ರಿಕತೆಯನ್ನು ಮುನ್ನೆಲೆಗೆ ತರಲು ಮೇಳದಲ್ಲಿ ಆದ್ಯತೆ

27ರಿಂದ ರಾಷ್ಟ್ರೀಯ ತೋಟಗಾರಿಕೆ ಮೇಳ

■ **ವಿಕ ಸುದ್ದಿಲೋಕ** ಬೆಂಗಳೂರು

ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರವು (ಐಐಎಚ್‌ಆರ್) ಫೆ.27ರಿಂದ ಮೂರು ದಿನ 'ರಾಷ್ಟ್ರೀಯ ತೋಟಗಾರಿಕೆ ಮೇಳ' ಆಯೋಜಿಸಿದೆ.

'ವಿಕಸಿತ ಭಾರತಕ್ಕಾಗಿ ತೋಟಗಾರಿಕೆ - ಪೋಷಣೆ, ಸಬಲೀಕರಣ ಮತ್ತು ಜೀವನೋಪಾಯ' ಶೀರ್ಷಿಕೆಯಡಿ ಮೇಳ ನಡೆಯಲಿದ್ದು, ಬೆಳೆಗಳ ಮೂಲಕ ಪೌಷ್ಟಿಕಾಂಶವುಳ್ಳ ತಳಿಗಳ ಪ್ರೋತ್ಸಾಹ ಹಾಗೂ ತಾಂತ್ರಿಕತೆಯನ್ನು ಮುನ್ನೆಲೆಗೆ ತರಲು ಆದ್ಯತೆ ನೀಡಲಾಗುತ್ತದೆ. ಈ ಹಿನ್ನೆಲೆಯಲ್ಲಿ 250 ಸಂಸ್ಥೆಗಳು ತಮ್ಮಲ್ಲಿ ಆವಿಷ್ಕರಿಸಿರುವ ಹೊಸ ಆವಿಷ್ಕಾರಗಳನ್ನು



ಪ್ರದರ್ಶಿಸಲಿವೆ. ಜತೆಗೆ ಐಐಎಚ್‌ಆರ್ ಕೂಡ ಬೆಳೆ ಸಂರಕ್ಷಣೆ, ಮೌಲ್ಯವರ್ಧನೆ, ಯಂತ್ರೋಪಕರಣ ಹಾಗೂ ಉಪಕರಣಗಳಿಗೆ ಸಂಬಂಧಿಸಿ 250ಕ್ಕೂ ಹೆಚ್ಚು ನಾನಾ ತಾಂತ್ರಿಕತೆಗಳನ್ನು ಮಳಿಗೆಗಳಲ್ಲಿ ರೈತರಿಗಾಗಿ ಪ್ರದರ್ಶಿಸಿ ಮಾಹಿತಿ ನೀಡಲಿದೆ.

ಹೊಸ ತಳಿಗಳ ಬಿಡುಗಡೆ: ಹೆಚ್ಚು ಇಳುವರಿ ನೀಡುವ ಕಲ್ಲಂಗಡಿ ತಳಿ, ಕಾಂಡ ಕೊರಕ/ಎಲೆಚುಕ್ಕಿ ರೋಗ ತಡೆದುಕೊಳ್ಳುವ 'ಅರ್ಕಾ ದೃಷ್ಟಿ, ಅರ್ಕಾ ನಿಹಿರಾ' ಮೆಣಸಿನಕಾಯಿ ತಳಿ, ಅಧಿಕ ಇಳುವರಿಯ ಸೋರೆಕಾಯಿ ತಳಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಗುತ್ತದೆ. ಜತೆಗೆ ರೆಡ್ ಡ್ರ್ಯಾಗನ್ ಫ್ರೂಟ್ ಪೌಡರ್ ತಂತ್ರಜ್ಞಾನ, ಹಲಸಿನ ಹಣ್ಣಿನಿಂದ ಮೌಲ್ಯವರ್ಧಿತ ಉತ್ಪನ್ನ ವಿಟಮಿನ್ 'ಡಿ' ಅಧಿಕವುಳ್ಳ ಅಣಬೆ ಸಹಿತ ಇತರ ತಳಿಗಳು ಹಾಗೂ ತೋಟದ ಬೆಳೆಗಳನ್ನು ರೈತರಿಗೆ ಪರಿಚಯಿಸಲಾಗುತ್ತದೆ.

ಮುಖ್ಯವಾಗಿ ರೈತರಿಗೆ ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ನಾನಾ ತಳಿಗಳು ಹಾಗೂ ತಾಂತ್ರಿಕತೆಯ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಗುತ್ತದೆ. ನಗರ ಕೃಷಿ, ಲಂಬ ಕೃಷಿ ಬಗ್ಗೆ ಮಾಹಿತಿ, ಅಣಬೆ ಬೇಸಾಯದ ಬಗ್ಗೆ ಕೌಶಲ ಆಧಾರಿತ ಕಾರ್ಯಾಗಾರ, ತೋಟಗಾರಿಕೆ ತಳಿಗಳ ಬೀಜಗಳು, ಸಂಸ್ಕರಿತ ಉತ್ಪನ್ನಗಳು, ಗಿಡಗಳ ಆರೈಕೆಗೆ ಬಳಸುವ ಸಾಧನ ಇತ್ಯಾದಿ ಉಪಕರಣಗಳನ್ನು ಮಾರಾಟಕ್ಕೆ ಇಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

V-karnataka pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

S-karnataka pg 05

100 ಜಿಲ್ಲೆಗಳಿಗೆ ಪಿಎಂ ಧನಧಾನ್ಯ

ದೇಶದ 1.7 ಕೋಟಿ ರೈತರಿಗೆ ವರದಾನ | ದೀರ್ಘ ಹಾಗೂ ಅಲ್ಪಾವಧಿ ಸಾಲ ಲಭ್ಯತೆ

ಕೃಷಿ ಹಾಗೂ ರೈತ ಕಲ್ಯಾಣ ವಲಯಕ್ಕೆ ಕಳೆದ ವರ್ಷದ ಬಜೆಟ್‌ನಲ್ಲಿ ಅದರ ಹಿಂದಿನ ವರ್ಷಕ್ಕಿಂತ ಶೇ.5ರಷ್ಟು ಮೊತ್ತವನ್ನು ಕಡಿತಗೊಳಿಸಿ ವ್ಯಾಪಕ ಟೀಕೆಗೆ ಒಳಗಾಗಿದ್ದ ಕೇಂದ್ರ ಸರ್ಕಾರ, ತನ್ನ ತಪ್ಪಿನ ಅರಿವಾಗಿದೆ ಎಂಬಂತೆ ಕೃಷಿ ವಲಯದ ಬಜೆಟ್ ಗಾತ್ರವನ್ನು ಸರಿಸುಮಾರು ಶೇ.8ರಷ್ಟು ಹೆಚ್ಚಳ ಮಾಡಿದ್ದು, 2025-26ನೇ ಸಾಲಿಗೆ 1,71,437 ಕೋಟಿ ರೂ.ಗಳನ್ನು ನಿಗದಿ ಮಾಡಿದೆ.

ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಧನ ಧಾನ್ಯ ಕೃಷಿ ಯೋಜನೆಯಡಿ ದೇಶದ 100 ಕೃಷಿಯಲ್ಲಿ ಹಿಂದುಳಿದ ಜಿಲ್ಲೆಗಳನ್ನು ಗುರುತಿಸಿ, ಈ ಜಿಲ್ಲೆಗಳ ಕೃಷಿ ಉತ್ಪಾದನೆ ಹೆಚ್ಚಳಕ್ಕೆ ಪೂರಕವಾದ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತದೆ. ಸರಿಸುಮಾರು 1.7 ಕೋಟಿ ರೈತರು ಯೋಜನೆ ಲಾಭ ಪಡೆಯಲಿದ್ದಾರೆ.

ಇದೇ ಮೊದಲ ಬಾರಿಗೆ ದೇಶದ ಕೃಷಿ ವಲಯದಲ್ಲಿ ಜಾಗತಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ 'ಗ್ರಾಮೀಣ ಸಂಪತ್ತು ಮತ್ತು ಸ್ಥಿರತೆ' ಕಾರ್ಯಕ್ರಮ ಘೋಷಿಸಲಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಗ್ರಾಮೀಣ ಮಹಿಳೆ, ಯುವ ಕೃಷಿಕರು, ಗ್ರಾಮೀಣ ಯುವಜನತೆ ಮತ್ತು ಸಣ್ಣ ರೈತರು, ಭೂರಹಿತರ ಕುಟುಂಬಗಳನ್ನು ಕಾರ್ಯಕ್ರಮ ಒಳಗೊಳ್ಳಲಿದೆ. ಗ್ರಾಮೀಣ ಜನರ ವಲಸೆ ತಡೆಯುವುದು ಯೋಜನೆಯ ಮೂಲ ಉದ್ದೇಶ. ದೇಶೀಯ ಮತ್ತು ಜಾಗತಿಕ ಕೃಷಿ ಪದ್ಧತಿಗಳ ಸಮ್ಮಿಲನದಿಂದ ವಲಯದಲ್ಲಿ ತಾಂತ್ರಿಕ ಉತ್ಕೃಷ್ಟತೆ, ಆರ್ಥಿಕ ಸ್ವಾವಲಂಬನೆಗೆ ದಾರಿಯಾಗಲಿದೆ ಇದಕ್ಕಾಗಿ ವಿವಿಧ ಹಂತದ ಹಣಕಾಸು ಸಂಸ್ಥೆಗಳು ನೆರವು ನೀಡಲಿವೆ.

ಆಹಾರ ಧಾನ್ಯಗಳ ಆತ್ಮನಿರ್ಭರತೆ: ರಾಷ್ಟ್ರೀಯ ಎಣ್ಣೆಕಾಳು ಮಿಷನ್ ಅನುಷ್ಠಾನ ಮಾಡುವುದಾಗಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ್ದು, ಖಾದ್ಯ ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ



ಗುರಿ ಹೊಂದಲಾಗಿದೆ. ಮುಂದಿನ ಆರು ವರ್ಷಗಳಲ್ಲಿ ಉದ್ದು, ತೊಗರಿ ಮತ್ತು ಮಸೂರ ಧಾನ್ಯಗಳ ಉತ್ಪಾದನೆಗೆ ಆದ್ಯತೆ ನೀಡಲಾಗುತ್ತದೆ. ದೇಶದಲ್ಲಿ ವೈಯಕ್ತಿಕ ಆದಾಯದಲ್ಲಿ ಹೆಚ್ಚಳವಾಗಿರುವುದರಿಂದ ಹಣ್ಣುಗಳ ಸೇವನೆ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದ್ದು, ಹಣ್ಣು ಬೆಳೆಗಾರರಿಗೆ ಪ್ರೋತ್ಸಾಹಧನ ಹೆಚ್ಚಳವನ್ನು ರಾಜ್ಯಗಳ ನೆರವಿನೊಂದಿಗೆ ಘೋಷಿಸಲಾಗಿದೆ.

ರಾಷ್ಟ್ರೀಯ ಅಧಿಕ ಇಳುವರಿ ಬೀಜ ಮಿಷನ್: ಕೇಂದ್ರ ಸರ್ಕಾರ ರಾಷ್ಟ್ರೀಯ ಅಧಿಕ ಇಳುವರಿ ಬೀಜ ಮಿಷನ್ ಘೋಷಿಸಿದ್ದು, ಬೀಜ ಸಂಶೋಧನೆಗೆ ಪೂರಕವಾದ ವಾತಾವರಣ ಕಲ್ಪಿಸುವ ಗುರಿ ಹೊಂದಿದೆ. ಅಧಿಕ ಇಳುವರಿ ತರುವ ಬೀಜಗಳ ಸಂಶೋಧನೆ, ಕೀಟ ನಿಗ್ರಹ ಹಾಗೂ ಅಸ್ಥಿರ ವಾಯುಗುಣ ಪ್ರತಿರೋಧಕ 100 ವಿಧದ ಬೀಜಗಳನ್ನು ವಾಣಿಜ್ಯ ಬಳಕೆಗೆ ಲಭ್ಯವಾಗಲಿವೆ.

ಮೀನುಗಾರಿಕೆಗೆ ರೂಪುರೇಷೆ: ಆಳಸಾಗರದಲ್ಲಿ ವಿಶೇಷವಾಗಿ ಅಂಡಮಾನ್ ನಿಕೋಬಾರ್ ಮತ್ತು ಲಕ್ಷದ್ವೀಪ ದ್ವೀಪಗಳಲ್ಲಿ ಮೀನುಗಾರಿಕೆಯ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಿ ಆ ಮೂಲಕ ಮೀನುಗಾರಿಕೆ ವಲಯದ ಸ್ಥಿರತೆ ತರಲು ಇದೇ ಮೊದಲ ಬಾರಿಗೆ ವಿಶೇಷ ಗಮನಹರಿಸಲಾಗಿದೆ. ಅದಕ್ಕಾಗಿ ಯೋಜನೆ ರೂಪುರೇಷೆ ಸಿದ್ಧಪಡಿಸುವುದಾಗಿ ಘೋಷಿಸಿದೆ.

ಹತ್ತಿ ವೈವಿಧ್ಯಕ್ಕೆ 5 ವರ್ಷ ಮಿಷನ್: ಅತ್ಯುತ್ತಮ ಗುಣಮಟ್ಟದ, ವೈವಿಧ್ಯಮಯ ವಿಧದ ಹಾಗೂ ಭಾರತೀಯ ಜವಳಿ ಉದ್ಯಮದ ದಿಕ್ಕು ಬದಲಿಸುವ ಮಹತ್ವದ ಹತ್ತಿ ಉತ್ಪನ್ನ ವಿಸ್ತರಣೆಗೆ 5 ವರ್ಷಗಳ ಕಾರ್ಯಕ್ರಮ ಘೋಷಿಸಲಾಗಿದೆ.

'UAS must be transformed into integrated agri varsity'

EXPRESS NEWS SERVICE
@ Bengaluru

MEMBERS of the Alumni Association of the University of Agricultural Sciences, Bengaluru (UAS-B) have demanded that the university should be transformed into an integrated agricultural university.

They argued that this change is crucial to expand the institution's scope and resources, enabling it to provide more comprehensive agricultural education and research that will benefit the state's farming community.

With UAS-B's role currently limited to just two campuses and its jurisdiction reduced following the establishment of Mandya Agricultural University, the association asserted that the university must evolve into a unified institution that can play a leading role in shaping the future of agriculture in Karnataka. They called for the consolidation of various agricultural institutions under UAS-B's umbrella, allowing the university to amplify its impact on the agricultural sector.

Association president Harish HL pointed out that UAS has long been the cornerstone of agricultural education in the state, but its role diminished recently after the Mandya Agricultural University was set up.

"We believe the university should evolve into a unified institution that can lead agricultural education and research across the state. The model proposed by the committee focused on Mandya Agricultural University, which combines agriculture and horticulture sciences, should now be adopted to ensure that UAS remains at the forefront of agricultural development," he emphasised.

Ind Exp Pg 04

Hosadiganta Pg 10

ಕೃಷಿ ಉತ್ಪಾದಕತೆ ಉತ್ತೇಜನ | ಅತೀ ಸಣ್ಣ ಮತ್ತು ಸಣ್ಣ ರೈತರು, ಭೂರಹಿತರಿಗೆ ಲಾಭ


ಅನ್ನದಾತನಿಗೆ ಧಾನ್ಯ ಕನಕವೃಷ್ಟಿ

ಭಾರತದ ಅಭಿವೃದ್ಧಿಯ ಪಯಣದಲ್ಲಿ ಕೃಷಿಯೇ ಮೊದಲ ಇಂಜಿನ್ ಎಂದು ಕೇಂದ್ರ ಸರ್ಕಾರದ 2025-26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಜೊತೆಗೆ, ಕೃಷಿ ವಲಯಕ್ಕೆ ಕೆಲ ಮಹತ್ವದ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಇದರಿಂದ ಕೃಷಿ ಉತ್ಪಾದಕತೆ ಉತ್ತೇಜನಗೊಂಡು ಅನ್ನದಾತರಿಗೆ ಪ್ರಯೋಜನವಾಗಲಿದೆ.

ಕೇಂದ್ರ ಸರ್ಕಾರ ಬಿಹಾರದಲ್ಲಿ ಮಖಾನಾ (ತಾವರೆ ಬೀಜ) ಮಂಡಳಿ ಸ್ಥಾಪನೆ ಮಾಡಲಿದೆ. ಇದು ಮಖಾನಾದ ಉತ್ಪಾದನೆ, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆಯನ್ನು ಸುಧಾರಿಸುತ್ತದೆ. ಅಲ್ಲದೇ ಈ ಚಟುವಟಿಕೆಗಳಲ್ಲಿ ಕೊಡಗಿರುವ ಜನರನ್ನು ರೈತ ಉತ್ಪಾದಕ ಸಂಸ್ಥೆ (ಎಫ್‌ಪಿಒ)ಗಳಾಗಿ ಸಂಘಟನೆಗೊಳ್ಳುವುದಕ್ಕೆ ಪ್ರೋತ್ಸಾಹ ನೀಡಲಿದೆ. ಮಂಡಳಿಯು ಮಖಾನಾ ರೈತರಿಗೆ ಹ್ಯಾಂಡ್‌ಹೋಲ್ಡಿಂಗ್ ಮತ್ತು ತರಬೇತಿಯ ಬೆಂಬಲವನ್ನೂ ಕೊಡಲಿದೆ. ಜೊತೆಗೆ, ಮಖಾನಾ ರೈತರು ಅದಕ್ಕೆ ಸಂಬಂಧಿಸಿದ ಸರ್ಕಾರಿ ಯೋಜನೆಗಳ ಪ್ರಯೋಜನ ಪಡೆಯುವುದನ್ನು ದೃಢಪಡಿಸಿಕೊಳ್ಳಲು ಇದು ಕೆಲಸ ಮಾಡಲಿದೆ.

ಪ್ರಧಾನಮಂತ್ರಿ ಧನ-ಧಾನ್ಯ ಕೃಷಿ ಯೋಜನೆ: ಆಯವ್ಯಯದಲ್ಲಿ ಘೋಷಣೆಯಾದ ಮತ್ತೊಂದು ಮಹತ್ವದ ಯೋಜನೆ ಪ್ರಧಾನಮಂತ್ರಿ ಧನ-ಧಾನ್ಯ ಕೃಷಿ ಯೋಜನೆ. ಇದನ್ನು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಅನುಷ್ಠಾನಿಸಲಾಗುತ್ತದೆ. ಮೊದಲ ಹಂತದಲ್ಲಿ ಕಡಿಮೆ ಇಳುವರಿ, ಮಧ್ಯಮ ಬೆಳೆ ತೀವ್ರತೆ ಮತ್ತು ಸರಾಸರಿಗಿಂತ ಕಡಿಮೆ ಸಾಲದ ನಿಯತಾಂಕ ಹೊಂದಿರುವ 100 ಜಿಲ್ಲೆಗಳನ್ನು ಒಳಗೊಂಡು ಧನ-ಧಾನ್ಯ ಕೃಷಿ ಯೋಜನೆ ರೂಪಿಸಲಾಗುತ್ತಿದೆ. ಈ ಯೋಜನೆಯಿಂದ 1.7 ಕೋಟಿ ರೈತರಿಗೆ ಅನುಕೂಲವಾಗಲಿದೆ. ಇದು ಕೃಷಿ ಉತ್ಪಾದಕತೆ ಹೆಚ್ಚಿಸಲಿದೆ, ಬೆಳೆ ವೈವಿಧ್ಯೀಕರಣ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು, ಪಂಚಾಯತ್ ಮತ್ತು ಕ್ಷೇತ್ರ ಮಟ್ಟದಲ್ಲಿ ಕೊಯ್ಲಿನ ನಂತರ ಸಂಗ್ರಹಣೆ ಹೆಚ್ಚಿಸಲಿದೆ, ನೀರಾವರಿ ಸೌಲಭ್ಯಗಳನ್ನು ಸುಧಾರಿಸುವುದು ಹಾಗೂ ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲದ ಲಭ್ಯತೆಯನ್ನು ಸುಗಮಗೊಳಿಸುವ ಗುರಿ ಹೊಂದಿದೆ.

ಗ್ರಾಮೀಣ ಸಮೃದ್ಧಿ ಮತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮ: ಸಮಗ್ರ ಬಹು-ವಲಯಗಳ ಗ್ರಾಮೀಣ ಸಮೃದ್ಧಿ ಮತ್ತು ಸ್ಥಿತಿಸ್ಥಾಪಕತ್ವ ಕಾರ್ಯಕ್ರಮ ಪ್ರಕಟಿಸಲಾಗಿದೆ. ಕೌಶಲ, ಹೂಡಿಕೆಯ ಮೂಲಕ ಕೃಷಿಯಲ್ಲಿನ ಕೊರತೆ ಪರಿಹರಿಸಲು ರಾಜ್ಯ ಸರ್ಕಾರಗಳ ಪಾಲುದಾರಿಕೆಯಲ್ಲಿ ಈ ಕಾರ್ಯಕ್ರಮ ಜಾರಿಯಾಗಲಿದೆ. ತಂತ್ರಜ್ಞಾನ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಇದು ಉತ್ತೇಜಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಅವಕಾಶಗಳನ್ನು ಸೃಷ್ಟಿಸುವುದು ಮುಖ್ಯ ಗುರಿಯಾಗಿದೆ. ಗ್ರಾಮೀಣ ಮಹಿಳೆಯರು, ಯುವ ರೈತರು, ಗ್ರಾಮೀಣ ಯುವಕರು, ಅತೀ ಸಣ್ಣ ಮತ್ತು ಸಣ್ಣ ರೈತರು ಮತ್ತು ಭೂರಹಿತ ಕುಟುಂಬಗಳನ್ನು ಈ ಯೋಜನೆ ಕೇಂದ್ರೀಕರಿಸಿದೆ.



- ಬಿಹಾರದಲ್ಲಿ ಮಖಾನಾ ಮಂಡಳಿ ಸ್ಥಾಪನೆ
- ಹೆಚ್ಚು ಇಳುವರಿ ನೀಡುವ ಬೀಜಗಳ ರಾಷ್ಟ್ರೀಯ ಮಿಷನ್ ಪ್ರಾರಂಭ
- 10 ಲಕ್ಷ ಜರ್ಮ್‌ಪ್ಲಾಸ್ಮಾ ಲೈನ್‌ಗಳನ್ನು ಹೊಂದಿರುವ ಎರಡನೇ ಜೀನ್ ಬ್ಯಾಂಕ್ ಸ್ಥಾಪನೆ
- ಹತ್ತಿ ಉತ್ಪಾದನೆಗೆ ಐದು ವರ್ಷಗಳ ಮಿಷನ್
- ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿ 3ಲಕ್ಷ ರೂ.ನಿಂದ 5ಲಕ್ಷ ರೂ.ಗೆ ಹೆಚ್ಚಳ
- ಅಸ್ಸಾಂನ ನಾಮ್ರೂಪ್‌ನಲ್ಲಿ 12.7 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ಯೂರಿಯಾ ಸ್ಥಾವರ ಸ್ಥಾಪನೆ

ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿ ಏರಿಕೆ

ರೈತರಿಗೆ ಮತ್ತಷ್ಟು ಸಾಲವನ್ನು ನೀಡುವ ದೃಷ್ಟಿಯಿಂದ ಕಿಸಾನ್ ಕ್ರೆಡಿಟ್ ಕಾರ್ಡ್‌ನ ಮಿತಿಯನ್ನು 3 ಲಕ್ಷದಿಂದ 5 ಲಕ್ಷ ರೂ.ಗೆ ಏರಿಕೆ ಮಾಡಲಾಗಿದೆ. ಸುಮಾರು 7.7 ಕೋಟಿ ರೈತರು, ಮೀನುಗಾರರು ಮತ್ತು ಹೈನುಗಾರರಿಗೆ ಅಲ್ಪಾವಧಿ ಸಾಲವನ್ನು ಸುಗಮಗೊಳಿಸುವಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳು (ಕೆಸಿಸಿ) ಪ್ರಮುಖ ಪಾತ್ರ ವಹಿಸುತ್ತವೆ. ಆದ್ದರಿಂದ ಪರಿಷ್ಕೃತ ಬಡ್ಡಿ ಸಹಾಯಧನ ಯೋಜನೆಯಡಿ ಸಾಲದ ಮಿತಿ ಇನ್ನುಮುಂದೆ 5 ಲಕ್ಷ ರೂ. ಆಗಲಿದೆ.

ಅಧಿಕ ಇಳುವರಿ ಬೀಜಗಳ ರಾಷ್ಟ್ರೀಯ ಮಿಷನ್

ಸಂಶೋಧನಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಗುರಿಯೊಂದಿಗೆ ಅಧಿಕ ಇಳುವರಿ ನೀಡುವ ಬೀಜಗಳ ರಾಷ್ಟ್ರೀಯ ಮಿಷನ್ ಪ್ರಾರಂಭಿಸಲಾಗುತ್ತದೆ. ಇದರಿಂದ ಹೆಚ್ಚಿನ ಇಳುವರಿ, ಕೀಟ ನಿರೋಧಕತೆ ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವದೊಂದಿಗೆ ಬೀಜಗಳ ಉದ್ದೇಶಿತ ಅಭಿವೃದ್ಧಿ ಮತ್ತು ಪ್ರಸರಣ ಹಾಗೂ 100 ಕ್ಕೂ ಹೆಚ್ಚು ಬೀಜ ಪ್ರಭೇದಗಳು ರೈತರಿಗೆ ಲಭ್ಯವಾಗಲಿವೆ.

Credit & welfare sops in growth sauce for kisan

TEAM TOI

Photo illustration: Ram



Times of Ind Pg 10

SOW IT BEGINS

Positioning agriculture as the "first" engine of growth, the Budget proposes multiple schemes to boost farming, including a special programme in 100 low-productivity agricultural districts.

Additionally, it proposes a six-year mission to make the country self-reliant in producing pulses, enhancing farmers' well-being and overall rural prosperity.

Govt has also proposed to increase the subsidised Kisan Credit Card (KCC) loan limit to Rs 5 lakh from Rs 3 lakh. KCC now facilitates short-term loans for 7.7 crore farmers, fishermen and dairy farmers.

The district-based scheme aims to enhance agricultural productivity, adopt crop diversification and sustainable agriculture practices, augment post-harvest storage at the panchayat and block levels, improve irrigation facilities and facilitate availability of long-and short-term credit.

The scheme will be implemented in partnership with states in the 100 agri districts that grapple with low productivity, moderate crop intensity and below-average credit. "This programme is likely to help 1.7 crore farmers," said FM Sitharaman.

The six-year mission for pulses will focus on boosting tur, urad and masoor output through development and commercial availability of climate-resilient seeds, enhancing protein content, increasing productivity, improving post-harvest storage and management, and assuring remunerative prices to farmers. "Under this initiative, cooperatives Nafed and NCCF will procure pulses for four years from registered farmers," the FM announced.

Other initiatives proposed include the launch of a National Mission on High Yielding Seeds and a Mission for Cotton Productivity; setting up a Makhana Board in Bihar; bringing out an enabling framework for sustainable harnessing of fisheries from Indian Exclusive Economic Zone and High Seas with a special focus on Andaman & Nicobar and Lakshadweep; and building a fertiliser plant with annual capacity of 12.7 lakh metric tonnes at Namrup, Assam.

ಪ್ರಜಾವಾಣಿ ವಾರ್ತೆ



Prajavani Pg 08

ಧಾನ್ಯಗಳಲ್ಲಿ ಆತ್ಮನಿರ್ಭರತೆ, ಸಾಲಮಿತಿ ಹೆಚ್ಚಳ, ಹತ್ತಿ ಉತ್ಪಾದನೆ ಏರಿಕೆಗೆ ಆದ್ಯತೆ

ಕೃಷಿ: ಹಲವು ಯೋಜನೆಗಳ ಬಿತ್ತನೆ

ಪಂಜಾಬ್‌ನ ಅಮೃತಸರದಲ್ಲಿ ಶನಿವಾರ ಸಾಸಿವೆ ಹೊಲದಲ್ಲಿ ಕಂಡ ರೈತ —ಎಎಫ್‌ಪಿ ಚಿತ್ರ

ಕೃಷಿಯನ್ನು ಅಭಿವೃದ್ಧಿಯ ಮೊದಲ ಎಂಜಿನ್ ಎಂದು ಬಣ್ಣಿಸಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಕೃಷಿ ಕ್ಷೇತ್ರಕ್ಕೆ ಹಲವು ಹೊಸ ಯೋಜನೆಗಳನ್ನು ಘೋಷಿಸಿದ್ದಾರೆ.

ಪ್ರಧಾನ ಮಂತ್ರಿ ಧನ-ಧಾನ್ಯ ಕೃಷಿ ಯೋಜನೆ: ಕಡಿಮೆ ಉತ್ಪಾದಕತೆ, ಕಡಿಮೆ ಬೆಳೆ ವೈವಿಧ್ಯ ಮತ್ತು ಕಡಿಮೆ ಸಾಲದ ಮಾನದಂಡಗಳಿರುವ ದೇಶದ 100 ಜಿಲ್ಲೆಗಳಲ್ಲಿ ಆಯಾ ರಾಜ್ಯಗಳ ಪಾಲುದಾರಿಕೆಯೊಂದಿಗೆ ಯೋಜನೆ ಜಾರಿಗೊಳಿಸಲಾಗುವುದು. ಉತ್ಪಾದಕತೆ, ಬೆಳೆ ವೈವಿಧ್ಯ ಹೆಚ್ಚಿಸುವುದು, ಪಂಚಾಯಿತಿ/ಬ್ಲಾಕ್ ಮಟ್ಟದಲ್ಲಿ ದಾಸ್ತಾನು ಕೇಂದ್ರಗಳ ಸ್ಥಾಪನೆ, ನೀರಾವರಿ ಸೌಲಭ್ಯ ಮತ್ತು ಸಾಲ ಸೌಲಭ್ಯ ಹೆಚ್ಚಿಸುವ ಮೂಲಕ 1.7 ಕೋಟಿ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶ ಹೊಂದಲಾಗಿದೆ.

ಧಾನ್ಯಗಳಲ್ಲಿ ಆತ್ಮನಿರ್ಭರತೆ: ಖಾದ್ಯ ತೈಲಗಳಲ್ಲಿ ಸ್ವಾವಲಂಬನೆಗಾಗಿ ಎಣ್ಣೆಬೀಜಗಳ ಉತ್ಪಾದನೆಗೆ ಬೆಂಬಲ ನೀಡಲಾಗುವುದು; ತೊಗರಿ, ಉದ್ದು, ಮಸೂರ ಹಾಗೂ ಬೇಳೆಕಾಳು ಉತ್ಪಾದನೆ ಹೆಚ್ಚಿಸಲು ಆರು ವರ್ಷಗಳ ಕಾರ್ಯಯೋಜನೆ ರೂಪಿಸಲಾಗುವುದು. ನಾಫೆಡ್ ಮತ್ತು ಎನ್‌ಸಿಸಿಎಫ್ ಮೂಲಕ ರೈತರಿಂದ 4 ವರ್ಷ ಬೇಳೆ-ಕಾಳುಗಳನ್ನು ಖರೀದಿಸಲಾಗುವುದು.

ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿ ಹೆಚ್ಚಳ: ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಪಡೆಯುವ ಸಬ್ಸಿಡಿ ಅಧಾರಿತವಾದ ಅಲ್ಪಾವಧಿ ಸಾಲದ ಮಿತಿ ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಳ ಮಾಡುವ ಮೂಲಕ 7.7 ಕೋಟಿ ರೈತರಿಗೆ ನೆರವು ನೀಡಲಾಗುವುದು.

ಹೆಚ್ಚು ಇಳುವರಿಯ ಬೀಜಗಳ ಸಂಶೋಧನೆ: ಕೀಟನಿರೋಧಕವಾದ, ಪ್ರತಿಕೂಲ ಹವಾಮಾನ ಎದುರಿಸಿಯೂ ತಾಳಿಕೆಯ ಗುಣವಿರುವ, ಹೆಚ್ಚು ಇಳುವರಿ ನೀಡುವ ಬೀಜಗಳ ಉತ್ಪಾದನೆಗೆ ಸಂಶೋಧನಾ ವ್ಯವಸ್ಥೆಯೊಂದನ್ನು ರೂಪಿಸಿ, 100 ಬೀಜತಳಿಗಳನ್ನು ಮಾರುಕಟ್ಟೆಗೆ ಬಿಡಲಾಗುವುದು.

ಬಿಹಾರದಲ್ಲಿ ಮಖಾನಾ ಮಂಡಳಿ: ಮಖಾನಾ (ಕಮಲದ ಬೀಜ) ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟಕ್ಕಾಗಿ ಬಿಹಾರದಲ್ಲಿ ಮಖಾನಾ ಮಂಡಳಿ ಸ್ಥಾಪಿಸಲಾಗುವುದು.

ತರಕಾರಿ, ಹಣ್ಣುಗಳಿಗಾಗಿ ಸಮಗ್ರ ಕಾರ್ಯಕ್ರಮ: ತರಕಾರಿ, ಹಣ್ಣು ಮತ್ತು 'ಶ್ರೀ ಅನ್ನ' (ಸಿರಿಧಾನ್ಯ) ಉತ್ಪಾದನೆ, ಸಂಸ್ಕರಣೆ ಮತ್ತು ಪೂರೈಕೆಗಾಗಿ ಹಾಗೂ ರೈತರಿಗೆ ಉತ್ತಮ ಬೆಳೆ ದೊರೆಯುವಂತೆ ಮಾಡಲು ರಾಜ್ಯಗಳ ಪಾಲುದಾರಿಕೆಯೊಂದಿಗೆ ಸಮಗ್ರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

5 ವರ್ಷದ ಹತ್ತಿ ಕಾರ್ಯಕ್ರಮ: ಭಾರತದ ಜವಳಿ ಉದ್ಯಮದ 5ಎಫ್ ಗುರಿಗೆ ತಕ್ಕಂತೆ ಹತ್ತಿಯ ವೈವಿಧ್ಯಮಯ ತಳಿಗಳ ಉತ್ಪಾದಕತೆ ಹೆಚ್ಚಿಸಲು ಐದು ವರ್ಷಗಳ ಕಾರ್ಯಕ್ರಮ ರೂಪಿಸಲಾಗುವುದು.

ಮೀನುಗಾರಿಕೆ: ಭಾರತದ ನಿರ್ದಿಷ್ಟ ಆರ್ಥಿಕ ವಲಯಗಳಲ್ಲಿ ಮತ್ತು ಅಂಡಮಾನ್, ನಿಕೋಬಾರ್, ಲಕ್ಷದ್ವೀಪ ಸೇರಿದಂತೆ ದೇಶದ ಗಡಿಗಳಾಚೆಗಿನ ಸಮುದ್ರದಲ್ಲಿ ಸುಸ್ಥಿರ ಮೀನುಗಾರಿಕೆಗೆ ಒಂದು ಚೌಕಟ್ಟು ರೂಪಿಸುವುದು.

ಎಂಎಸ್‌ಪಿ ಪ್ರಸ್ತಾಪ ಇಲ್ಲ

ಬಜೆಟ್ ಅನ್ನು ಹಣಕಾಸು ಸಚಿವರು ಪ್ರಾರಂಭಿಸಿದ್ದೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ವಿವರಗಳನ್ನು ನೀಡುವ ಮೂಲಕ. ಆದರೆ, ರೈತರ ದೀರ್ಘಾವಧಿ ಬೇಡಿಕೆಗಳಾದ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ, ಸಾಲ ಮನ್ನಾ ಬಗ್ಗೆ ಏನೊಂದನ್ನೂ ಅವರು ಪ್ರಸ್ತಾಪಿಸಿಲ್ಲ.

'ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಣಕಾಸು ಸಚಿವೆ ಬಜೆಟ್ ಮಂಡನೆ ಶುರುಮಾಡಿದರಷ್ಟೆ. ಆದರೆ, ಎಂಎಸ್‌ಪಿಗೆ ಕಾನೂನು ಖಾತರಿ ನೀಡಬೇಕು ಎನ್ನುವುದೂ ಸೇರಿ ರೈತರ ಬೇಡಿಕೆಗಳಿಗೆ ಅವರು ಪೂರ್ಣಪ್ರಮಾಣದಲ್ಲಿ ಮೌನ ತಾಳಿದರು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಏಕತ್ರ ಸೂತ್ರದ ಜಪ: ಹೆಚ್ಚಿಸದ ಅನ್ನದಾತರ ವಿಶ್ವಾಸ



ವಿಶ್ಲೇಷಣೆ

ಸಾರ್ಥಕ್ ಪ್ರಧಾನ್

ತ್ತು ವಿಸ್ತೃತ ಕ್ಷೇತ್ರಗಳಿಗೆ ಗಮನ ನೀಡುವ ಮೂಲಕ ಸರ್ಕಾರವು ಅಭಿವೃದ್ಧಿಗೆ ಆದ್ಯತೆ ನೀಡಲಿದೆ ಎಂಬುದನ್ನು ಪ್ರಧಾನವಾಗಿ ಹೇಳುವ ಮೂಲಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣ ಆರಂಭಿಸಿದರು. ಅವರು ನೀಡಿದ ಪಟ್ಟಿಯಲ್ಲಿನ ಮೊದಲ ಎರಡು ಕ್ರಮಗಳು 'ಕೃಷಿ ಬೆಳವಣಿಗೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು' ಮತ್ತು 'ಗ್ರಾಮೀಣ ಸಮೃದ್ಧಿಯನ್ನು, ಚೇತರಿಕೆ'ಯನ್ನು ಖಾತರಿಪಡಿಸುವುದು. ಆದರೆ, ಬಜೆಟ್ ವಿವರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವಿಶ್ವಾಸ ಹೆಚ್ಚಿಸುವ ಅಂಶಗಳು ಕಾಣುವುದಿಲ್ಲ.

ಕೃಷಿ ಮತ್ತು ರೈತರ ಅಭಿವೃದ್ಧಿ ಇಲಾಖೆಗೆ 2025-26ಕ್ಕೆ ನಿಗದಿ ಮಾಡಿರುವ ಅನುದಾನವು 2024-25ರ ಪರಿಷ್ಕೃತ ಅಂದಾಜಿಗಿಂತ ಶೇಕಡ 3ರಷ್ಟು ಕಡಿಮೆ ಇದೆ. ಕೃಷಿ ಸಂಶೋಧನೆ ಮತ್ತು ಶಿಕ್ಷಣಕ್ಕೆ ಮೀಸಲಿರಿಸಿರುವ ಮೊತ್ತ ಕೂಡ ಕಳೆದ ವರ್ಷದ ಪರಿಷ್ಕೃತ ಅಂದಾಜಿಗಿಂತ ಕಡಿಮೆ ಇದೆ. ಇದು ಕಳವಳ ಮೂಡಿಸುವಂಥದ್ದು. ಏಕೆಂದರೆ, ಕೃಷಿ ಕ್ಷೇತ್ರದಲ್ಲಿನ ಸಂಶೋಧನೆಗಳು ಸುಸ್ಥಿರವಾದ ದೀರ್ಘಾವಧಿ ಪ್ರಯೋಜನಗಳನ್ನು ಒದಗಿಸುತ್ತವೆ. ಭೂಸಂಪನ್ಮೂಲ ಇಲಾಖೆಗೆ ನೀಡಿರುವ ಅನುದಾನ ಕೂಡ ಹಿಂದಿನ ವರ್ಷದ ಬಜೆಟ್ ಅಂದಾಜಿಗಿಂತ ಕಡಿಮೆ ಇದೆ. ಬೆಳೆ ವಿಮೆಯಂತಹ ಯೋಜನೆಗಳಿಗೆ ಅನುದಾನವು ಕಡಿಮೆ ಆಗಿದೆ.

'ಪ್ರಧಾನ ಮಂತ್ರಿ ಧನಧಾನ್ಯ ಕೃಷಿ ಯೋಜನೆ'ಯನ್ನು ಸರ್ಕಾರ ರೂಪಿಸಲಿದೆ ಎಂದು ಸಚಿವೆ ಹೇಳಿದ್ದಾರೆ. ಇದು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು, ಕೃಷಿ ಬೆಳಗಳ ಸಂಖ್ಯೆಯನ್ನು ಏರಿಕೆ ಮಾಡಲು ಹಾಗೂ ಬೆಳೆ ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಲು ಈಗ ಚಾಲ್ತಿಯಲ್ಲಿರುವ ಯೋಜನೆಗಳನ್ನು ಒಂದುಗೂಡಿಸುವ ಕೆಲಸ ಮಾಡುತ್ತದೆ. ಹೀಗೆ ಮಾಡಲು ಮುಂದಾಗಿರುವುದು ಸರಿಯಾಗಿಯೇ ಇದೆ.



ನವದೆಹಲಿಯ ಸಮೀಪದ ಕೃಷಿ ಜಮೀನಿನೊಂದರಲ್ಲಿ ಶನಿವಾರ ಸೋರೆಕಾಯಿ ಬೀಜದ ಬಿತ್ತನೆಯಲ್ಲಿ ತೊಡಗಿದ್ದ ಮಹಿಳೆ —ಎಎಫ್‌ಪಿ ಚಿತ್ರ

ಏಕೆಂದರೆ ಒಂದೇ ವಿಷಯಕ್ಕೆ ಯೋಜನೆಗಳ ಸಂಖ್ಯೆ ಹೆಚ್ಚಾದಾಗ ಉತ್ತರದಾಯಿತ್ವ ಮತ್ತು ದಕ್ಷತೆ ಕಡಿಮೆಯಾಗುತ್ತದೆ, ಇದರಿಂದಾಗಿ ಉತ್ಪಾದಕತೆ ತಗ್ಗುತ್ತದೆ. ಆದರೆ, ಹೊಸ ಯೋಜನೆಯ ಯಶಸ್ಸು ಅದರ ಅನುಷ್ಠಾನ ಆಧರಿಸಿದೆ. ಬಜೆಟ್ ಭಾಷಣದಲ್ಲಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಕೆಲವು ವಿವರಗಳಾದ ಅನುದಾನ, ಅದರ ಫಲಿತಾಂಶಗಳ ಬಗ್ಗೆ ಮಾತು ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಅವಕಾಶಗಳನ್ನು ಹೆಚ್ಚಿಸಲು ಮತ್ತು ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಕಡಿಮೆ ಇರುವುದನ್ನು ಸರಿಪಡಿಸಲು ಹಲವು ವಲಯಗಳನ್ನು ಒಳಗೊಳ್ಳುವ 'ಗ್ರಾಮೀಣ ಸಮೃದ್ಧಿ ಮತ್ತು ಚೇತರಿಕೆ' ಯೋಜನೆಯನ್ನು ಘೋಷಿಸಲಾಗಿದೆ. ಆದರೆ ಇದಕ್ಕೆ ಎಷ್ಟು ಅನುದಾನ, ಯೋಜನೆಯ ಪ್ರಯೋಜನಗಳು ಏನು ಎಂಬುದನ್ನು ವಿವರಿಸಿಲ್ಲ. ಎರಡೂ ಕ್ರಮಗಳು ರಾಜ್ಯಗಳ ಜೊತೆಗಿನ ಪಾಲುದಾರಿಕೆಯನ್ನು ಆಧರಿಸಿರುವ ಕಾರಣ, ಫಲಿತಾಂಶವು ರಾಜ್ಯ-ಕೇಂದ್ರ ಸಂಬಂಧದ ಮೇಲೆ ನಿಂತಿದೆ.

ಹಣಕಾಸು ಸಚಿವರು ಧಾನ್ಯಗಳ ಉತ್ಪಾದನೆಯಲ್ಲಿ ಆತ್ಮನಿರ್ಭರತೆಯನ್ನು ಸಾಧ್ಯವಾಗಿಸಲು, ತರಕಾರಿ ಮತ್ತು ಹಣ್ಣು ಬೆಳೆಗಳಿಗಾಗಿ ಯೋಜನೆ ಆರಂಭಿಸುವ, ಬಿಹಾರದಲ್ಲಿ ಮಖಾನಾ ಮಂಡಳಿ ಸ್ಥಾಪಿಸುವ, ಹತ್ತಿ ಉತ್ಪಾದಕತೆಗೆ ಪ್ರತ್ಯೇಕ ಮಿಷನ್ ಆರಂಭಿಸುವ ಘೋಷಣೆ ಮಾಡಿದ್ದಾರೆ. ಈ ಘೋಷಣೆಗಳಿಗೆ ₹100 ಕೋಟಿಯಿಂದ ₹1,000 ಕೋಟಿವರೆಗೆ ಅನುದಾನ ನಿಗದಿ ಮಾಡಲಾಗಿದೆ. ಆದರೆ ಕೃಷಿ ಬಜೆಟ್ ಗಾತ್ರ ಗಮನಿಸಿದರೆ, ಈ ಅನುದಾನ ಕಡಿಮೆ.

ರಸ್ತೆ ಸಂಪರ್ಕವು ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ವದ ಪಾತ್ರ ಹೊಂದಿದೆ. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ 2024-25ರ ಪರಿಷ್ಕೃತ ಅಂದಾಜನ್ನು ಅವಲೋಕಿಸಿದಾಗ, ಬಜೆಟ್ ಘೋಷಣೆಗಿಂತ ಅದು ಶೇ 25ರಷ್ಟು ಕಡಿಮೆ ಇದ್ದಿದ್ದು ಕಾಣುತ್ತದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪರಿಷ್ಕೃತ ಅಂದಾಜು ಶೇ 40ರಷ್ಟು ಕಡಿಮೆಯಾಗಿತ್ತು. ಅನುದಾನ ಕಡಿಮೆ ಆಗಿದ್ದುದು ಯೋಜನೆಗಳ ಅನುಷ್ಠಾನದಲ್ಲಿನ ಅಸಾಮರ್ಥ್ಯವನ್ನು ತೋರಿಸುತ್ತದೆ.

ಕೃಷಿ ಕ್ಷೇತ್ರವನ್ನು ನೆಚ್ಚಿಕೊಂಡಿರುವ ಜನರ ಸಂಖ್ಯೆ ಹೆಚ್ಚಿರುವ ಕಾರಣಕ್ಕೆ ಕೃಷಿ ಮತ್ತು ಗ್ರಾಮೀಣ ಉತ್ಪಾದಕತೆಯನ್ನು ಬಲಪಡಿಸುವ ಕೆಲಸವನ್ನು ಬಜೆಟ್ ಮಾಡಬಹುದಿತ್ತು. ಉದಾಹರಣೆಗೆ, ಗ್ರಾಮೀಣ ಮತ್ತು ಕೃಷಿ ಸಂಬಂಧಿತ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಬಹುದಿತ್ತು. ಬೆಲೆಯಲ್ಲಿನ ವ್ಯತ್ಯಾಸಗಳನ್ನು ಕಡಿಮೆ ಮಾಡುವುದಕ್ಕೆ ವ್ಯವಸ್ಥೆ ರೂಪಿಸಬಹುದಿತ್ತು. ಮಾರುಕಟ್ಟೆಯ ಬೇಡಿಕೆಗಳಿಗೆ ಅನುಗುಣವಾಗಿ ಸ್ಪಂದಿಸಲು ರೈತರಿಗೆ ಉತ್ತೇಜನ ನೀಡುವ ಕೆಲಸ ಆಗಬಹುದಿತ್ತು.

ಲೇಖಕ- ಬೆಂಗಳೂರಿನ ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನಲ್ಲಿ ಸಹಾಯಕ ಪ್ರಾಧ್ಯಾಪಕ

Prajavani Pg 08